'ನಾನು ಈಗಿಂದೀಗಲೇ ಹೊರಡುತ್ತಿದ್ದೇನೆ...' ಫೋನ್ ಕಟ್ ಮಾಡುತ್ತಾ ಹೇಳಿದರು ಡಾಕ್ಟರ್ ಗಾಂಧೇರ್ ಭಾಯಿ. ನಾನು ಹ್ಯಾರಿಯ ಕೋಣೆಗೆ ಬಂದು, 'ಡಾಕ್ಟರ್ ಈಗ ಬರುತ್ತಾರಂತೆ ಹ್ಯಾರಿ... ಅಲ್ಲೀವರೆಗೂ ನೀನು ಕಿಂಚಿತ್ತೂ ಮಿಸುಕಾಡದೆ, ನಿಶ್ಶಬ್ದವಾಗಿ ಮಲಗಿರಬೇಕಂತೆ' ಎಂದೆ.

'ಅವನು ಏನಂತ ಅದ್ಕೊಂಡಿದ್ದಾನಂತೆ? ಈಗ ನಾನೇನಾದ್ರೂ ಡ್ಯಾನ್ಸ್ ಮಾಡುತ್ತಿದ್ದೀನಾ?' ಹ್ಯಾರಿ ಕೋಪದಿಂದ ಹೇಳಿದ.

'ಹ್ಯಾರಿ!... ಡಾಕ್ಟ್ರು ಮಾತನಾಡುವುದೂ ಬೇಡವೆಂದು ಹೇಳಿದ್ದಾರೆ. ನನಗೂ ಕಣಯ್ಯ!'

'ಹಂಗಾದ್ರೆ ನೀನು ಮೊದಲು ಮುಚ್ಕಂಡಿರು!' ಪಾಪ, ಅವನು ಮಾನಸಿಕವಾಗಿ ನಿಜವಾಗಲೂ ಸುಸ್ತಾಗಿದ್ದ.

ಅವನು ಹಾಗೆ ಹೇಳುವಾಗ ಅವನ ಕೆಳತುಟಿ ಬಳಿಯ ನರವೊಂದು ಮೆಲ್ಲಗೆ ಕಂಪಿಸುತ್ತಿತ್ತು. ನಾನು ಕರ್ಚೀಪನ್ನು ಹೊರತೆಗೆದು ಅವನ ಮುಖ ಮತ್ತು ಕತ್ತನ್ನು ಒರೆಸಿದೆ. ತುಟಿಯಂಚಿನ ನರಗಳು ಇನ್ನೂ ಕಂಪಿಸುತ್ತಿದ್ದವು. ನಾನು ಅಡುಗೆಮನೆಗೆ ಹೋಗಿ ಕೆಲವು ಐಸ್ ತುಂಡುಗಳನ್ನು ತಂದು ಒಂದು ಬಟ್ಟೆಯಲ್ಲಿ ಸುತ್ತಿ ಪುಡಿ ಮಾಡಿದೆ. ಅವನು ಮತನಾಡುತ್ತಿರುವ ಧಾಟಿ, ಕಂಪಿಸುತ್ತಿರುವ ತುಟಿಗಳು ನನಗೆ ಯಾಕೋ ಸರಿಕಾಣಲಿಲ್ಲ. ನಾನು ಐಸಿನ ಬಟ್ಟೆಗಂಟನ್ನು ಅವನ ಹಣೆಯ ಮೇಲೆರಿಸಿದೆ.

'ಸ್ವಲ್ಪ ತಣ್ಣಗಾಗಲಿ ಎಂದು...' ನಾನೆಂದೆ.

ಅವನು ಎರಡೂ ಕಣ್ಣುಗಳನ್ನು ಮುಚ್ಚುತ್ತಾ ಅವಡುಗಚ್ಚಿ ಶ್ವಾಸವನ್ನು ಎಳೆಯುತ್ತಾ, 'ಮೊದಲು ತೆಗೀ ಅದನ್ನ... ನನಗೆ ಕೆಮ್ಮು ಬರುತ್ತಿದೆ' ಎಂದ. ಅವನ ತುಟಿಯಂಚಿನ ನರಗಳು ಜೋರಾಗಿ ಕಂಪಿಸುತ್ತಿದ್ದವು. ಅಷ್ಟರಲ್ಲಿ ಒಂದು ಕಾರಿನ ದೀಪಗಳು ಹ್ಯಾರಿ ಪೋಪನ ಕಿಟಕಿಯ ಮೇಲೆ ಪ್ರತಿಫಲಿಸಿದವು. ಡಾಕ್ಟರ್ ಗಾಂಧೇರ್ ಭಾಯಿ ಬಂದಿದ್ದರು. ನಾನು ಅವರನ್ನು ಭೇಟಿಯಾಗಲು ಹೊರಗೆ ಹೋದೆ.

'ಹೇಗಿದ್ದಾರೆ ಹ್ಯಾರಿ?' ಮೆಟ್ಟಿಲುಗಳನ್ನು ಹತ್ತುತ್ತಿರುವಾಗಲೇ ಕೇಳಿದರು ಡಾಕ್ಟರ್ ಗಾಂಧೇರ್ ಭಾಯಿ. ಹಾಗೆಯೇ ಒಳಗೆ ಕಾಲಿಡುತ್ತಾ, 'ಎಲ್ಲಿ? ನಡೀರಿ...' ಎಂದರು. ಡಾ. ಗಾಂಧೇರ್ ಭಾಯಿ ಹವಾಯಿ ಚಪ್ಪಲಿಗಳನ್ನು ಧರಿಸಿದ್ದರು. ನಾನವರನ್ನು ಹ್ಯಾರಿ ಮಲಗಿದ್ದ ರೂಮಿಗೆ ಕರೆದುಕೊಂಡು ಹೋದೆ. ಹ್ಯಾರಿ ವಾರೆಗಣ್ಣಿಂದ ಅವರನ್ನು ಗಮನಿಸುತ್ತಿದ್ದ. ಡಾಕ್ಟರ್ ಗಾಂಧೇರ್ ಭಾಯಿ ಅವನೆಡೆಗೆ, ನಾನಿದ್ದೇನೆ ಕಣಪ್ಪ ನೀನು ಹೆದರಬೇಡ ಎಂಬಂತ ಸಂದೇಶಕೊಡುವ ಮುಗುಳ್ನಗೆ ಬೀರಿದರು. ಒಮ್ಮೆ ಎಲ್ಲವನ್ನೂ ಅವಲೋಕಿಸಿ ಅಲ್ಲಿಂದ ಡಾಕ್ಟರ್ ಗಾಂಧೇರ್ ಭಾಯಿ ನಡುಕೋಣೆಗೆ ಬಂದರು, ನಾನವರನ್ನು ಹಿಂಬಾಲಿಸಿದೆ.

'ಮೊದಲು, ನಾನು ಹ್ಯಾರಿಗೊಂದು ಕೊಳಕು ಮಂಡಲ ಹಾವಿನ ಪ್ರತಿರೋಧಕ ಚುಚ್ಚುಮದ್ದನ್ನು ಕೊಡುತ್ತೇನೆ...' ಎನ್ನುತ್ತಾ ಬ್ಯಾಗನ್ನು ತೆರೆದು ಇಂಜೆಕ್ಷನ್ ತಯಾರು ಮಾಡತೊಡಗಿದರು... 'ಹ್ಯಾರಿ ಕಿಂಚಿತ್ತೂ ಅಲುಗಾಡದೆ ಇಂಜೆಕ್ಷನ್ ತೆಗೆದುಕೊಳ್ಳುವಂತೆ ನೋಡುವುದು ಅತೀ ಮುಖ್ಯ.' ನಾವು ಅಡುಗೆಕೋಣೆಗೆ ಬಂದೆವು. ಸ್ಟೌ ಹಚ್ಚಿ, ನೀರು ಕುದಿಸಿ ಇಂಜೆಕ್ಷನ್ ಸೂಜಿಯನ್ನು ಡಾಕ್ಟರ್ ಸ್ಟರಿಲೈಜ್ ಮಾಡಿದರು. ನಂತರ ಅದನ್ನು ತೆಗೆದು ಒಂದು ಸಿರಿಂಜಿಗೆ ಸಿಗಿಸಿ. ಅದರಿಂದ ಒಂದು ಬಾಟಲಿಯಿಂದ ಹಳದಿ ಬಣ್ಣದ ದ್ರವ್ಯವನ್ನು ಎಳೆದುಕೊಂಡು ನನ್ನ ಕೈಗಿತ್ತರು. 'ನಾನು ಕೇಳುವವರೆಗೂ ನಿಮ್ಮ ಬಳಿ ಇರಲಿ ಮಿಸ್ಟರ್ ಟಿಂಬರ್...' ಎಂದರು